# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:12-01-2026ರಂದು ಸೋಮವಾರ ಪೂರ್ವಾಹ್ನ 11.30 ಘಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ 2025-26ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| **ಹಾಜರಾದ ಸದಸ್ಯರು :** | **ಪದನಾಮ** |
|---|---|
| 1. **ಪ್ರೊ. ಶರತ್ ಅನಂತಮೂರ್ತಿ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. **ಶ್ರೀಮತಿ ಶೋಭಾ. ಹೆಚ್. ಎ.**<br>ಜಂಟಿ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. **ಶ್ರೀ ಎನ್. ಕುಮಾರ್**<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. **ಶ್ರೀ ಶಿವಕುಮಾರ**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 5. **ಶ್ರೀ ಎ. ಎಲ್. ಮಂಜುನಾಥ್.** ಕೆ. ಎ. ಎಸ್. ಸೂಪರ್ ಟೈಮ್ ಸ್ಕೇಲ್<br>ಕುಲಸಚಿವರು (ಆಡಳಿತ) | ಸದಸ್ಯರು |
| 6. **ಪ್ರೊ. ಆರ್. ತಿಮ್ಮರಾಯಪ್ಪ**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 7. **ಪ್ರೊ. ಹೆಚ್. ಎನ್. ರಮೇಶ.**<br>ಹಣಕಾಸು ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |
| **ಗೈರು ಹಾಜರಾದ ಸದಸ್ಯರು** | |
| 1) **ಶ್ರೀ ಬಸವರಾಜ. ಎಸ್.**<br>ನಿರ್ದೇಶಕರು<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 2) **ಶ್ರೀ. ಡಿ. ಎಸ್. ಅರುಣ್.**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |

ಪ್ರಸ್ತಾವನೆ:

ಪ್ರಾರಂಭದಲ್ಲಿ ಹಣಕಾಸು ಅಧಿಕಾರಿಗಳು ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ನೂತನ ಸದಸ್ಯರಾದ ಶ್ರೀಮತಿ, ಶೋಭಾ. ಹೆಚ್. ಎ. ಜಂಟಿ ಕಾರ್ಯದರ್ಶಿಗಳು , ಆರ್ಥಿಕ ಇಲಾಖೆ ಇವರನ್ನು 2025-26ನೇ ಸಾಲಿನ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಗೆ ಪರಿಚಯಿಸಿದರು.

ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯದ ವಿಸ್ತೀರ್ಣ,ಅಳತೆ,ಕ್ಯಾಂಪಸ್ ಮತ್ತು ವಿದ್ಯಾರ್ಥಿ ಮತ್ತು ವಿಭಾಗಗಳ ಕುರಿತು ವಿವರವಾದ ಮಾಹಿತಿಯನ್ನು ಪಿಪಿಟಿ ಮೂಲಕ ಸಭೆಯ ಅವಗಾಹನೆಗೆ ತಂದರು. ವಿಶ್ವವಿದ್ಯಾಲಯದ 230 ಎಕರೆ ಭೂಪ್ರದೇಶದ 20 ವರ್ಷಗಳ ಗುತ್ತಿಗೆ ಅವಧಿ ನವೀಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಗೆ (NPV) (Net Present Value) ಸುಮಾರು ಅಂದಾಜು ರೂ. 42.00ಕೋಟಿ ಪಾವತಿಸುವ ಸಂಭವ ಇರುವುದರಿಂದ ಘನ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಸಹಾಯ ಮಾಡಬೇಕೆಂದು ಮಾನ್ಯ ಕುಲಸಚಿವರು ಕೋರಿದರು.

ಘನ ಸರ್ಕಾರವು 2025-26ನೇ ಆರ್ಥಿಕ ವರ್ಷಕ್ಕೆ ಹೆಚ್ಚುವರಿಯಾಗಿ ವಿಶ್ರಾಂತಿ ವೇತನವನ್ನು ಪಾವತಿಸಲು ರೂ. 15.00 ಕೋಟಿಗಳನ್ನು ಬಿಡುಗಡೆ ಮಾಡಿರುವುದರಿಂದ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಪರವಾಗಿ ಘನ ಸರ್ಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು.

ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| **2025-ಹಸ:2.1** | **ದಿನಾಂಕ:16-09-2025ರಂದು ನಡೆದ 2025-26ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| **ನಿರ್ಣಯ:** | ದಿನಾಂಕ:16-09-2025ರಂದು ನಡೆದ 2025-26ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| **2025-ಹಸ:2.2** | **ದಿನಾಂಕ:16-09-2025ರಂದು ನಡೆದ 2025-26ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| **ನಿರ್ಣಯ:** | ದಿನಾಂಕ:16-09-2025ರಂದು ನಡೆದ 2025-26ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| **2025-ಹಸ:2.3** | **2024-25ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳ ಅವಲೋಕನ ಹಾಗೂ ಅನುಮೋದನೆ ಕುರಿತು.** |
| **ಚರ್ಚೆ** | 2024-25ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಪಿಪಿಟಿ ಮೂಲಕ ವಿವರದೊಂದಿಗೆ ಮಂಡಿಸಿ ಸಭೆಯ ಅನುಮೋದನೆಯನ್ನು ಹಣಕಾಸು ಅಧಿಕಾರಿಯವರು ಕೋರಿದ್ದರು. ಪಿಪಿಟಿಯಲ್ಲಿ ನಮೂದಿಸಿದಂತೆ ಬೋಧಕ ಹುದ್ದೆಗಳಲ್ಲಿ 90ಖಾಲಿ ಹುದ್ದೆಗಳೆದುರಾಗಿ 374ಅತಿಥಿ ಉಪನಾಸಕರನ್ನು ನೇಮಕ ಮಾಡಿಕೊಂಡಿರುವುದನ್ನು ಹಾಗೂ ಖಾಲಿಯಿರುವ ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ |

ಬೋಧಕೇತರ ಸಿಬ್ಬಂದಿಗಳಿರುವುದನ್ನು ಸರ್ಕಾರದ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಗಮನಿಸಿ, ಇದರಿಂದ ವಿಶ್ವವಿದ್ಯಾಲಯ ಆಂತರಿಕ ಸಂಪನ್ಮೂಲ ಸಾಕಾಗುತ್ತಿಲ್ಲವೆಂದು ತಿಳಿಸಿದರು ಹಾಗೂ ವಿಶ್ವವಿದ್ಯಾಲಯವು ಹೆಚ್ಚುವರಿ ಬೋಧಕ/ ಬೋಧಕೇತರ ಹುದ್ದೆಗಳನ್ನು ಕಡಿತಗೊಳಿಸುವಂತೆ ಹಾಗೂ ಕಡಿಮೆ ಬೇಡಿಕೆಯಿರುವ ಕೋರ್ಸುಗಳನ್ನು ಸ್ಥಗಿತಗೊಳಿಸುವಂತೆ ಸಲಹೆ ನೀಡಿದರು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸರ್ಕಾರದ ಸೂಚನೆಗಳನ್ನು ಪಾಲಿಸದಿದ್ದಲ್ಲಿ ವಿಶ್ವವಿದ್ಯಾಲಯಕ್ಕೆ ನೀಡಲಾದ ಅನುದಾನವನ್ನು ಕಡಿತಗೊಳಿಸಲಾಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಆದ್ದರಿಂದ ವಿಶ್ವವಿದ್ಯಾಲಯವು ಈ ಸಂಬಂಧ ಗಂಭೀರವಾಗಿ ಗಮನಹರಿಸಬೇಕೆಂದು ಸಲಹೆ ನೀಡದರು.

ಈ ಬಗ್ಗೆ ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದ ಪ್ರಾರಂಭದಲ್ಲಿ ಮಂಜೂರಾದ ಹುದ್ದೆಗಳು ಹೊರತು ಪಡಿಸಿ ಬೇರೆ ಯಾವುದೇ ಹುದ್ದೆಗಳು ಮಂಜೂರಾಗಿರುವುದಿಲ್ಲ ಅಗತ್ಯಕ್ಕನುಗುಣವಾಗಿ ಹೊಸ ಕೋರ್ಸುಗಳನ್ನು ಪ್ರಾರಂಭಿಸಿದ ಹಿನ್ನಲೆಯಲ್ಲಿ ಹಾಗೂ ನಿವೃತ್ತ ಬೋಧಕರಿಂದಾಗಿ ಹೆಚ್ಚುವರಿ ಅತಿಥಿ ಉಪನ್ಯಾಸಕರು ಅವಶ್ಯಕವಾಗಿರುತ್ತದೆ. ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಹಣಕಾಸು ಅಧಿಕಾರಿಗಳು ಮಾತನಾಡಿ ಪಠ್ಯಕ್ರಮನುಸಾರವಾಗಿ ಅತಿಥಿ ಉಪನ್ಯಾಸಕರಗಳನ್ನು ನಿಯಮಾನುಸಾರ ಸೇವೆಯನ್ನು ಪಡೆಯಲಾಗಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಸಚಿವರು ಮಾತನಾಡಿ ಈಗಾಗಲೇ ಅನುಮೋದನೆಯಾಗದೆ ಇರುವ ಕೋರ್ಸುಗಳಿಗೆ ಪರಿನಿಯಮಗಳನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರವು ಕೆಲವು ಅಕ್ಷೇಪಣೆಗಳನ್ನು ವ್ಯಕ್ತಪಡಿಸಿ ಹಿಂದುರಿಗಿಸಲಾಗಿದ್ದು, ಅಕ್ಷೇಪಣೆಗಳನ್ನು ಸರಿಪಡಿಸಿ ವಿವಿಧ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಉನ್ನತ ಶಿಕ್ಷಣ ಪರಿಷತ್‌ಗೆ ಕಳುಹಿಸಿಕೊಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮುಂದುವರೆದು ಸರ್ಕಾರದ ಪ್ರತಿನಿಧಿಗಳು ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗಿರುವ ವಿಭಾಗಗಳನ್ನು ಮುಕ್ತಾಯಗೊಳಿಸಿ ಅತಿಥಿ ಉಪನ್ಯಾಸಕರುಗಳನ್ನು ಕಡಿಮೆ ಮಾಡಲು ತಿಳಿಸಿದರು. ವಿವಿಧ ಹೊಸ ಕೋರ್ಸುಗಳಿಗೆ ತಯಾರಿಸಲಾದ ಪರಿನಿಯಮಗಳನ್ನು ತುರ್ತಾಗಿ ಸರ್ಕಾರದಿಂದ ಅನುಮೋದನೆಯನ್ನು ಪಡೆಯುವಂತೆ ಸಲಹೆ ನೀಡಿದರು. ಮುಂದಿನ ದಿನಗಳಲ್ಲಿ ಯಾವುದೇ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಘನ ಸರ್ಕಾರದ ಅನುಮತಿಯನ್ನು ಕಡ್ಡಾಯವಾಗಿ ಪಡೆದು ಪ್ರಾರಂಭಿಸಲು ತಿಳಿಸಿದರು.

**ನಿರ್ಣಯ**

2024–25ನೇ ಅರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ಸುಧೀರ್ಘವಾಗಿ ಚರ್ಚಿಸಿದ ನಂತರ ಅನುಮೋದಿಸಿತು.

| Particulars | Cash (Rs. lakhs) | TDR |
|---|---|---|
| Opening Balance | 2250.28 | 7918.94 |
| Total Receipts | 14385.12 | 400.08 |
| Total Expenditure | 14660.50 | 1984.08 |
| Closing Balance | 1974.89 | 6334.94 |
| | | |

| | |
|---|---|
| **2025–ಹಸ:2.4** | **2024–25ನೇ ಆರ್ಥಿಕ ವರ್ಷದ ಏಪ್ರಿಲ್–2024ರಿಂದ ಮಾರ್ಚ್ –2025ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಕುರಿತು.** |
| ನಿರ್ಣಯ | 2024–25ನೇ ಆರ್ಥಿಕ ವರ್ಷದ ಏಪ್ರಿಲ್–2024ರಿಂದ ಮಾರ್ಚ್ –2025ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಹಣಕಾಸು ಅಧಿಕಾರಿಗಳು ಸಭೆಯ ಅವಗಾಹನೆಗೆ ತಂದರು. ಏಪ್ರಿಲ್–2024ರಿಂದ ಮಾರ್ಚ್ –2025ರವರೆಗಿನ ಸ್ವೀಕೃತಿ ರೂ.14385.12 ಲಕ್ಷ ಹಾಗೂ ವೆಚ್ಚ ರೂ.14660.50 ಲಕ್ಷಗಳನ್ನು ಸಭೆಯು ಅವಲೋಕಿಸಿತು. |
| **2025–ಹಸ:2:5** | **ಏಕರೂಪ ಪರೀಕ್ಷಾ ಸಂಭಾವನೆ ಮತ್ತು ಇತರೆ ಭತ್ಯೆ/ಸಂಭಾವನೆಗಳಲ್ಲಿ ಇಲ್ಲದೇ ಇರುವ ಹಾಗೂ ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡಿದ್ದಂತಹ ಭತ್ಯೆ/ ಸಂಭಾವನೆಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.** |
| **ಚರ್ಚೆ** | ಏಕರೂಪ ಪರೀಕ್ಷಾ ಸಂಭಾವನೆ ಮತ್ತು ಇತರೆ ಭತ್ಯೆ/ಸಂಭಾವನೆಗಳಲ್ಲಿ ಇಲ್ಲದೇ ಇರುವ ಹಾಗೂ ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡಿದ್ದಂತಹ ಭತ್ಯೆ/ ಸಂಭಾವನೆಗಳನ್ನು ಅಳವಡಿಸಿಕೊಳ್ಳುವ ಕುರಿತು ಮಾನ್ಯ ಕುಲಸಚಿವರು(ಪರೀಕ್ಷಾಂಗ) ಇವರು ಸಭೆಯ ಅನುಮೋದನೆಯನ್ನು ಕೋರಿದರು.<br><br>ಸರ್ಕಾರದ ಪ್ರತಿನಿದಿಗಳು ಮಾತನಾಡುತ್ತಾ, ಸರ್ಕಾರದ ಆದೇಶ ಸಂಖ್ಯೆ: ಇಡಿ:/385/ಯುಆರ್‌ಸಿ/2022 ಬೆಂಗಳೂರು ದಿನಾಂಕ: 16–10–2023ರ ಸರ್ಕಾರದ ಆದೇಶವನ್ನು ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಅದಾಗ್ಯೂ ಸದರಿ ಆದೇಶದಲ್ಲಿ ಇಲ್ಲದೇ ಇರುವಂತಹ ಸಂಭಾವನೆಯನ್ನು ಪಾವತಿಸುವ ಮೊದಲು ಇತರೆ ವಿಶ್ವವಿದ್ಯಾಲಯಗಳಲ್ಲಿ ಭತ್ಯೆ/ ಸಂಭಾವನೆಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಕ್ರೋಢೀಕರಿಸಿ ವಿವರವಾದ ಪ್ರಸ್ತಾವನೆಯನ್ನು ಘನ ಸರ್ಕಾರಕ್ಕೆ ವಿವರದೊಂದಿಗೆ ಅನುಮೋದನೆಗೆ ಸಲ್ಲಿಸಲು ತಿಳಿಸಿದರು. ನಂತರ ಮಾನ್ಯ ಕುಲಸಚಿವರು (ಆಡಳಿತ) ಇವರು ಸಹ ಸಭೆಯ ಅನುಮೋದನೆಯನ್ನು ಕೋರಿದರು. |
| ನಿರ್ಣಯ: | ಸಭೆಯು ಸುಧೀರ್ಘವಾಗಿ ಚರ್ಚಿಸಿದ ನಂತರ ಏಕರೂಪ ಪರೀಕ್ಷಾ ಸಂಭಾವನೆ ಮತ್ತು ಇತರೆ ಭತ್ಯೆ/ಸಂಭಾವನೆಗಳಲ್ಲಿ ಇಲ್ಲದೇ ಇರುವ ಬಾಬ್ತುಗಳಿಗೆ ಇತರೆ ವಿಶ್ವವಿದ್ಯಾಲಯಗಳಲ್ಲಿ ಭತ್ಯೆ/ ಸಂಭಾವನೆಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಕ್ರೋಢೀಕರಿಸಿ ವಿವರವಾದ ಪ್ರಸ್ತಾವನೆಯನ್ನು ಘನ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. |
| **2025–ಹಸ:2:6** | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.**<br>**–ಯಾವುದೂ ಇರುವುದಿಲ್ಲ –** |
| | ಅಂತಿಮವಾಗಿ ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಯವರು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು. |
| | ಸಹಿ/–<br>**(ಪ್ರೊ. ಹೆಚ್. ಎನ್.ರಮೇಶ)** **(ಪ್ರೊ. ಶರತ್ ಅನಂತಮೂರ್ತಿ)**<br>**ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು** **ಕುಲಪತಿಗಳು ಹಾಗೂ ಅಧ್ಯಕ್ಷರು** |